

ದೇಶದಲ್ಲಿ ಅಂದಾಜು 80 ಲಕ್ಷ ಜನ ಅಗರಬತ್ತಿ ಉದ್ಯಮದಲ್ಲಿ ತೊಡಗಿಸಿಕೊಂಡು ಆರ್ಥಿಕ ಸ್ವಾವಲಂಬನೆಯತ್ತ ಹೆಜ್ಜೆ ಹಾಕಿದ್ದಾರೆ. ರಾಜ್ಯದಲ್ಲಿ ಬೆಂಗಳೂರು, ಮಂಡ್ಯ, ಮೈಸೂರು, ಕೋಲಾರ ಮುಂತಾದ ಭಾಗಗಳಲ್ಲಿ ಅಗರಬತ್ತಿ ಉತ್ಪಾದನೆಯಲ್ಲಿ ಮಹಿಳೆಯರದ್ದೇ ಕಾರುಬಾರು.

■ **ಉಮಾ ಅನಂತ್**

# ಅಗರಬತ್ತಿ ಘಮ; ಮಹಿಳೆಯರ ಶ್ರಮ

ಗಂಧದ ಕಡ್ಡಿಯ ಘಮಕ್ಕೆ ಮನಸೋಲದವರಾರು? ಶ್ರೀಗಂಧದ, ಮಲ್ಲಿಗೆ, ಸಂಪಿಗೆ, ಗುಲಾಬಿ, ರಜನಿಗಂಧ ಮುಂತಾದ ಸುವಾಸನೆ ಬೀರುವ ಹಿತವಾದ ಹೊಗೆ ಮನೆ ತುಂಬಾ ಆವರಿಸಿತೆಂದರೆ ಅದು ಒಂದು ರೀತಿಯ ‘ಡಿವೈನ್’ ಭಾವವನ್ನು ಬಿಂಬಿಸುತ್ತದೆ. ಪೂಜಾ ಕೋಣೆಯಲ್ಲಿ ಊದಿನಕಡ್ಡಿ ಹಚ್ಚಿದರೆ ಅದರಿಂದ ಹೊಮ್ಮುವ ಘಮಲು ಹಿತವಾದ ಅನುಭವವನ್ನೂ ಮೂಡಿಸುತ್ತದೆ. ದೇವರ ಮುಂದೆ ದೀಪ ಹಚ್ಚಿದ ನಂತರ ಅಗರಬತ್ತಿ ಹಚ್ಚಿ ಕೈ ಮುಗಿದರೆ ಅದು ಪೂಜೆಯ ಒಂದು ಭಾಗ ಮುಗಿದಂತೆ. ಹೀಗಾಗಿ ಗಂಧದ ಕಡ್ಡಿಗೆ ದೇವಸ್ಥಾನ, ಮಸೀದಿ ಮಾತ್ರವಲ್ಲ ಎಲ್ಲರ ಮನೆಗಳಲ್ಲೂ ಸದಾ ಅಗ್ರಸ್ಥಾನ.

ಸಾಂಬ್ರಾಣಿ ಕಡ್ಡಿ, ಊದಿನ ಕಡ್ಡಿ, ಗಂಧದ ಕಡ್ಡಿ, ಅಗರಬತ್ತಿ, ಇನ್ಸೆನ್ಸ್ ಸ್ಟಿಕ್ಸ್.. ಮುಂತಾದ ಹೆಸರುಗಳಿಂದ ಕರೆಯಲಾಗುವ ಈ ಘಮ ಕಡ್ಡಿಗೆ ಸದಾ ಕಾಲ ಬೇಡಿಕೆ.

ಕರ್ನಾಟಕದಲ್ಲಿ ಮೈಸೂರು ಹಾಗೂ ಕೋಲಾರ ಅಗರಬತ್ತಿ ತಯಾರಿಕೆಗೆ ಬಹಳ ಪ್ರಸಿದ್ಧ. ಈ ಕಾಯಕದಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಂಖ್ಯೆಯೂ ಅತ್ಯಧಿಕ ಈ ಭಾಗದಲ್ಲೇ. ಅತ್ಯುತ್ತಮ ಸುವಾಸನೆ, ಉತ್ಕೃಷ್ಟ ಗುಣಮಟ್ಟದೊಂದಿಗೆ ತಯಾರಿಸುವ ಊದಿನಕಡ್ಡಿಗಳು ವಿದೇಶಗಳಿಗೂ ರಫ್ತಾಗುತ್ತಿವೆ. ದೇಶದ ನಾನಾ ರಾಜ್ಯಗಳಿಂದಲೂ ಬೇಡಿಕೆ ಬರುವುದು ಮೈಸೂರು ಹಾಗೂ ಕೋಲಾರ ಅಗರಬತ್ತಿಗಳಿಗೇ.

ಹಾಗೆ ನೋಡಿದರೆ 1950ರ ದಶಕದಲ್ಲೇ ಬೆಂಗಳೂರು, ಕೋಲಾರ, ಮೈಸೂರು, ಚಿಂತಾಮಣಿ, ನಂಜನಗೂಡುಗಳಲ್ಲಿ ಅಗರಬತ್ತಿ ಕಾರ್ಖಾನೆಗಳು ಹುಟ್ಟಿಕೊಂಡವು. ಉದ್ಯೋಗ ಅರಸಿ ಬರುವವರಿಗೆಲ್ಲ ಕೈತುಂಬ ಕೆಲಸ, ಕುಟುಂಬ ನಿರ್ವಹಣೆಗೆ ಅಡ್ಡಿ ಇಲ್ಲ ಎನಿಸುವಷ್ಟು ಸಂಪಾದನೆ ಸಿಗತೊಡಗಿತು. ಜನರಿಂದ ಬೇಡಿಕೆಯೂ ಹೆಚ್ಚಾಯಿತು. ಕಾರ್ಖಾನೆಗಳೂ ಹೆಚ್ಚತೊಡಗಿದವು. ಪುರುಷರು, ಮಹಿಳೆಯರು ಇದೇ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲಾರಂಭಿಸಿದರು. ಕ್ರಮೇಣ ಈ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಿತು.



ಪಾಂಡವಪ
ಸಿದ್ಧವಾಗು